> ಅಮ್ಮನ ಆಗಲಿಕೆಯ ದುಃಖವನ್ನು ಅದುಮಿ ಹಿಡಿದ ನಿರ್ಭಾವವಿತ್ತು. ಹೇಗೆ ಕೇಳಲಿ? ಮುಂದಿನ ಹತ್ತಾರು ದಿನಗಳಲ್ಲೂ ಈ ತಳಮಳವನ್ನು ಕಳೆಯದೇ ಕರ್ಮಾಂತರದ ವಿಧಿಗಳಲ್ಲಿ ವ್ಯಾಕುಲತೆಯಿಂದಲೆ ಒಳಗೊಂಡೆ.

ಸೇರಿಕೊಂಡಿದ್ದರು. ನನ್ನ ಡಿಗ್ರಿ ಪರೀಕ್ಷೆಗಳು ಬಾಕಿಯಿದ್ದುದರಿಂದ ನಾನೂ ಮನೆಯಲ್ಲುಳಿದಿದ್ದೆ. ದೂರದ ಯಾವುದೋ ಹೊಸಮನೆಯ ಮರಗೆಲಸ ಒಪ್ಪಿಕೊಂಡ ಚಿಕ್ಕಪ್ಪ ಬೆಳಗುಮುಂಚೆ ಬಹಳ ಬೇಗ ಹೊರಟುಹೋದರೆ ಮತ್ತೆ ಮನೆಸೇರುವಾಗ ರಾತ್ರಿ ತಡವಾಗುತ್ತಿತ್ತು. ಯಾರೂ ಇರುವುದಿಲ್ಲ ಎಂದು ತಿಳಿದೂ ಬಂದಳಲ್ಲ ಪ್ರೇಮಾ—ನನಗಾಗಿಯೇ ಅಲ್ವೆ? ನನ್ನ ಎದೆಬಡಿತ ನನಗೇ ಕೇಳಿಸುವಂತಿತ್ತು. ಯಾರಾದರೂ ಗಮನಿಸುವಷ್ಟು ಸಮೀಪದಲ್ಲಿ ಬೇರೆ ಮನೆಗಳಿರಲಿಲ್ಲ. "ಒಳಗೆ ಬಾ" ಅಂದೆ. ಬರಲಿಲ್ಲ. ಎಂದಿನಂತೆ ಹಿತ್ತಿಲಲ್ಲೇ ಚಿಕ್ಕಮ್ಮ ಬೆಳೆದಿದ್ದ ಹೂಗಿಡಗಳ ನಡುವೆ ಬಟ್ಟೆ ಒಗೆಯುವ ಕಲ್ಲಿನ ಮೇಲೆ ಕುಳಿತಳು. ಮಲ್ಲಿಗೆ ಅಂದರೆ ಪ್ರೇಮಾಗೆ ಪ್ರಾಣ ಅಂತ ತಿಳಿದಿತ್ತು. ರಾಶಿಯಾಗಿ ಅರಳಿ ಉದುರಿದ್ದ ಹೂಗಳ ನಡುವಿನಿಂದ ಒಂದಿಷ್ಟು ಹೊಸ ಮೊಗ್ಗುಗಳನ್ನು ಬಿಡಿಸಿ ಆಕೆಯ ಬಳಿಸಾರಿ ಅಂಗೈಯೊಳಗಿಟ್ಟೆ. ಆ ಕೈಯನ್ನು ಹಾಗೇ ಮೆತ್ತಗೆ ಅದುಮಿ ಹಿಡಿದೆ. ಕಷ್ಟಪಟ್ಟು ಅವಳ ಕಣ್ಣುಗಳನ್ನು ದಿಟ್ಟಿಸಿದೆ. "ಹೇಗೆ ಬಂದೆ? ನಾನು ಅಂದ್ರೆ ಅಷ್ಟು ಇಷ್ಟವಾ?" ಇದ್ದ ಧೈರ್ಯವನ್ನೆಲ್ಲಾ ಒಟ್ಟುಮಾಡಿ ಕೇಳಿದ್ದೆ. ಆದರೂ ದನಿಯೊಳಗಿನ ನಡುಕ ಸಣ್ಣದಾದರೂ ಸ್ಪಷ್ಟವಾಗಿತ್ತು. "ಅಷ್ಟೂ ಗೊತ್ತಿಲ್ವಾ... ಇನ್ನೂ..." ಜೇನಿನಲ್ಲಿ ಅದ್ದಿ ತೆಗೆದಂತಹ ಶಬ್ದಗಳು! ಸಾಕು—ಇಷ್ಟು ಸಾಕು! ಜನ್ಮ ಜನ್ಮಾಂತರದ ಪುಣ್ಯವೆಲ್ಲಾ ತಲೆ ಮೇಲಿಂದ ಸುರಿದಂತೆ ಪುಲಕಿತ ಭಾವವೊಂದು ಮೈಮನದ ತುಂಬ ಹರಿದಾಡಿತು. ಆಕೆ ಹೆಚ್ಚು ಹೊತ್ತು ನಿಲ್ಲಲಿಲ್ಲ. ಹಿಡಿದ ಮಲ್ಲಿಗೆಗಳು ಬಿರಿದಾಗ ಬೀರುವ ಕಂಪಿನ ಆಹ್ಲಾದವನ್ನು ನನಗೆ ಬಳಿದು, ಆ ಪರವಶ ಅನುಭೂತಿಯ ಆಳದಲ್ಲಿ ತನ್ನೊಡನೆ ನನ್ನನ್ನೂ ಮುಳುಗಿಸಿ, ಅಲ್ಲಿ ಹಾಗೇ ಬಿಟ್ಟು ಮಾಯವಾದಳು. ಆ ಅರಳುಗಣ್ಣುಗಳು ರಾತ್ರಿಯಿಡೀ ಅಲ್ಲಲ್ಲಿ ನನ್ನನ್ನು ದಿಟ್ಟಿಸುತ್ತಿರುವ ಮೋಹಕ ಮರುಳಲ್ಲಿ ದಿಕ್ಕಿಲ್ಲದೆ ಅಲೆದೆ. ಏನೇನೋ ಎಡವಟ್ಟು ಮಾಡಿ ಚಿಕ್ಕಪ್ಪನಿಂದ ಬೈಸಿಕೊಂಡೆ. ಓದು ಮುಗ್ಗರಿಸಿ ತೆವಳತೊಡಗಿತು. ಬೇರೆ ಯಾವ ಯೋಚನೆಯೂ ಬರುತ್ತಿರಲಿಲ್ಲ. ಕತ್ತಲೆಗೆ ದೇವರ ಮುಂದೆ ದೀಪಹಚ್ಚಿ ಸಣ್ಣದೊಂದು ಪೂಜಾಕೈಂಕರ್ಯವಿತ್ತು. ಅವಳದೇ ಭಾವಬಿಂಬವನ್ನು ಕಲ್ಪಿಸಿಕೊಂಡು ಅದೇ ಧ್ಯಾನದಲ್ಲಿರುತ್ತಿದ್ದೆ. ಅರ್ಚನೆಗೆ ಕೈಗೆತ್ತಿಕೊಂಡ ಹೂಗಳ ಒಡಲೆಲ್ಲ ಪ್ರೀತಿಯ ಕಡಲಿನಿಂದ ತೆಗೆದಂತೆ ತೇವವಿರುತ್ತಿತ್ತು. ಆರತಿಯ ಬೆಳಕಲ್ಲಿ ಆಕೆಯ ಕಣ್ಣುಗಳ ಪ್ರಭೆಯೇ ಪ್ರತಿಫಲಿಸಿದ ಅನಿಸಿಕೆ. ಈ ಮೋಡಿಯಲ್ಲೆ ಒಂದಿಷ್ಟು ದಿನಗಳು ಪರಿವೆಯೇ ಇಲ್ಲದಂತೆ ಸರಿದು ಹೋದುವು. ಜನ್ಮವಿಡೀ ಅನುಭವಿಸಿದರೆ ಸರಿದೂಗುವಷ್ಟು ಸ್ನೇಹ—ಪ್ರಣಯಭಾವ ಪರಸ್ಪರ ವಿನಿಮಯವಾಯ್ತು. ಆ ಪರಾಕಾಷ್ಠೆಯಲ್ಲೂ ಅಂಕೆ ಮೀರಲಿಲ್ಲ ಅನ್ನುವುದೇ ಮರೆಯಲಾಗದ ವಿಸ್ಮಯ.

ಅದೇ ಕಲ್ಲು, ಅದೇ ಹಿತ್ತಿಲು – ಅಲ್ಲಿಂದಾಚೆಗಿಲ್ಲ. ಮನೆಯೊಳಗೂ ಹೋಗದೆ ನಮ್ಮ ಪಿಸುನುಡಿಗಳೆಲ್ಲಾ ಅಲ್ಲಿನ ಹಸಿರಿನೊಂದಿಗೆ ಕಳೆಗೂಡುತ್ತಿದ್ದವು. ಸಲ್ಲಾಪಗಳು ರಾತ್ರಿಯ ಕತ್ತಲಿನೊಳಗೆ ಅವಿತಿರಲು ಕಾಯುತ್ತಿದ್ದೆವು. ಮನೆಮಂದಿ ಯಾತ್ರೆಯಿಂದ ಹಿಂದಿರುಗುವ ಮೊದಲೇ ಅನಿರೀಕ್ಷಿತ